ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 18–11–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **ಕೃಷಿ ಮೇಳ – 2014:**<br><br>**ಉದ್ಘಾಟನೆ:**<br><br>ಶ್ರೀ ವಜುಭಾಯಿ ವಾಲಾ,<br>ಘನತೆವೆತ್ತ ರಾಜ್ಯಪಾಲರು<br>ಕರ್ನಾಟಕ ಸರ್ಕಾರ,<br>ಬೆಂಗಳೂರು.<br><br>**ಅಧ್ಯಕ್ಷತೆ:**<br><br>ಶ್ರೀ ಕೃಷ್ಣ ಭೈರೇಗೌಡ,<br>ಕೃಷಿ ಸಚಿವರು.<br><br>**ಮುಖ್ಯ ಅತಿಥಿಗಳು:**<br><br>ಶ್ರೀ ಶ್ರೀ ಕೌಶಿಕ್ ಮುಖರ್ಜಿ,<br>ಮುಖ್ಯ ಕಾರ್ಯದರ್ಶಿಗಳು,<br>ಕರ್ನಾಟಕ ಸರ್ಕಾರ<br><br>ವಿ.ಸೂ: ಬೆಂಗಳೂರು ಕಬ್ಬನ್ ಉದ್ಯಾನವನದ ಪ್ರೆಸ್ ಕ್ಲಬ್ ಆವರಣದಿಂದ ಬೆಳಗ್ಗೆ 10.15 ಗಂಟೆಗೆ ಕೃಷಿ ವಿಶ್ವ ವಿದ್ಯಾನಿಲಯದ ವಾಹನ ವ್ಯವಸ್ಥೆ ಮಾಡಲಾಗಿದೆ. | 19–11–2014<br>ಬುಧವಾರ ಬೆಳಗ್ಗೆ<br>11–00 ಗಂಟೆಗೆ | ಗಾಂಧಿ ಕೃಷಿ ವಿಜ್ಞಾನ ಕೇಂದ್ರ<br>(ಜಿ.ಕೆ.ವಿಕೆ.)<br><br>ಬೆಂಗಳೂರು, |

| | | | |
|---|---|---|---|
| | <u>ಸಂಪರ್ಕ</u>:<br><br>ಡಾ ಎಲ್. ರಾಮಕೃಷ್ಣ ರಾವ್,<br>ಮೊ. ನಂ. 9986663132<br>ಶ್ರೀ ಅಶೋಕ್<br>ಮೊ. ಸಂ. 9886690866 | | |
| 2. | <u>ಕೃಷಿ ಮೇಳ – 2014</u>: ಪ್ರಶಸ್ತಿ ಪ್ರದಾನ ಸಮಾರಂಭ<br><br><u>ಪ್ರಶಸ್ತಿ ಪ್ರದಾನ:</u><br><br>ಶ್ರೀ ರಾಮಲಿಂಗಾ ರೆಡ್ಡಿ,<br>ಸಾರಿಗೆ ಸಚಿವರು<br><br>ಶ್ರೀಮತಿ ಎನ್. ಶಾಂತಕುಮಾರಿ,<br>ಮಹಾಪೌರರು,<br>ಬೃಹತ್ ಬೆಂಗಳೂರು ಮಹಾನಗರಪಾಲಿಕೆ.<br><br>ವಿ.ಸೂ: ಬೆಂಗಳೂರು ಕಬ್ಬನ್ ಉದ್ಯಾನವನದ ಪ್ರೆಸ್ ಕ್ಲಬ್ ಆವರಣದಿಂದ ಮಧ್ಯಾಹ್ನ 1-30 ಗಂಟೆಗೆ ಕೃಷಿ ವಿಶ್ವ ವಿದ್ಯಾನಿಲಯ ವಾಹನ ವ್ಯವಸ್ಥೆ ಮಾಡಲಾಗಿದೆ.<br><br><u>ಸಂಪರ್ಕ</u>:<br><br>ಡಾ ಎಲ್. ರಾಮಕೃಷ್ಣ ರಾವ್,<br>ಮೊ. ನಂ. 9986663132<br><br>ಶ್ರೀ ಅಶೋಕ್<br>ಮೊ. ಸಂ. 9886690866 | 19-11-2014<br>ಬುಧವಾರ<br><br>ಮಧ್ಯಾಹ್ನ<br>2-30 ಗಂಟೆಗೆ | ಕೃಷಿ ಮೇಳ ಮೈದಾನ,<br><br>ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿ.ಕೆ.ವಿಕೆ.)<br><br>ಬೆಂಗಳೂರು, |
| 2. | <u>ಆಕಾಶವಾಣಿ, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಭಾರತೀಯ ವಿದ್ಯಾಭವನ ; 'ಚಿತ್ತಾಲ – ಚಿಂತನೆ ಕಾರ್ಯಕ್ರಮ:'</u> | 19-11-2014<br>ಬುಧವಾರ<br>ಮಧ್ಯಾಹ್ನ | ಖಿಂಚ ಸಭಾಂಗಣ,<br>ಭಾರತೀಯ ವಿದ್ಯಾ ಭವನ,<br><br>ರೇಸ್ ಕೋರ್ಸ್ ರಸ್ತೆ, |

| | | | |
|---|---|---|---|
| | **ಶ್ರೀ ಯಶಂತ ಚಿತ್ತಾಲರ ಬದುಕು – ಸಾಹಿತ್ಯ ಕುರಿತ ವಿಚಾರ ಸಂಕಿರಣ.**<br><br>**ವಿಚಾರ ಮಂಡನೆ:**<br>**ಶ್ರೀ ಜಯಂತ ಕಾಯ್ಕಿಣಿ,**<br>**ಶ್ರೀ ಎಸ್. ದಿವಾಕರ್,**<br>**ಡಾ. ಬಿ.ಎನ್. ಸುಮಿತ್ರ ಬಾಯಿ,**<br>**ಡಾ. ರಾಜೇಂದ್ರ ಚೆನ್ನಿ** | **3–00 ಗಂಟೆಗೆ** | **ಬೆಂಗಳೂರು – 560 001.** |

ನಿರ್ದೇಶಕರ ಪರವಾಗಿ

# <u>ಪತ್ರಿಕಾ ಪ್ರಕಟಣೆ</u>

## ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರ ಗಮನಕ್ಕೆ

ಬೆಳಗಾವಿಯಲ್ಲಿ ಡಿಸೆಂಬರ್ 9 ರಿಂದ 20 ರ ವರೆಗೆ ನಡೆಯಲಿರುವ ರಾಜ್ಯ ವಿಧಾನ ಮಂಡಲ ಅಧಿವೇಶನದ ವರದಿಗಾಗಿ ಹಾಜರಾಗ ಬಯಸುವ ಸುದ್ದಿವಾಹಿನಿಗಳು ಹಾಗೂ ರಾಜ್ಯಮಟ್ಟದ ದಿನಪತ್ರಿಕೆಗಳ ***ಮಾನ್ಯತೆ ಪಡೆದ*** ಪ್ರತಿನಿಧಿಗಳ ವಿವರಗಳನ್ನು ಸಂಸ್ಥೆಯ ಶೀರ್ಷಿಕಾ ಪತ್ರ(ಲೆಟರ್‌ಹೆಡ್)ದಲ್ಲಿ ನಮೂದಿಸಿ ಸಲ್ಲಿಸಲು ಕೋರಲಾಗಿದೆ.

ಈ ಕೆಳಗೆ ನೀಡಿರುವ ನಮೂನೆಯ ಮಾದರಿಯಲ್ಲಿ ವಿವರಗಳನ್ನು ಒದಗಿಸಿ, ಸಂಸ್ಥೆಯ ಮುಖ್ಯಸ್ಥರೇ ಶಿಫಾರಸು ಮಾಡಿರಬೇಕು. ಮುದ್ರಣ ಮಾಧ್ಯಮದ ಗರಿಷ್ಠ ನಾಲ್ಕು ಪ್ರತಿನಿಧಿಗಳು ಹಾಗೂ ವಿದ್ಯುನ್ಮಾನ ಮಾಧ್ಯಮದ ವರದಿಗಾರರು, ಕ್ಯಾಮರಾಮನ್ ಸೇರಿದಂತೆ ಗರಿಷ್ಠ 8 ಪ್ರತಿನಿಧಿಗಳಿಗೆ ಮಾತ್ರ ವಾಸ್ತವ್ಯ ವ್ಯವಸ್ಥೆ ಕಲ್ಪಿಸಲಾಗುವುದು. ಈ ಶಿಫಾರಸು ಪತ್ರ ಸಲ್ಲಿಸಲು ನವೆಂಬರ್ 25 ಕೊನೆಯ ದಿನವಾಗಿದೆ.

ವಿ.ಸೂ:

1. ಹಿಂದಿನ ಅಧಿವೇಶನದಲ್ಲಿ ಒದಗಿಸಿರುವ ಪ್ರವೇಶ ಪತ್ರ ಈ ಅಧಿವೇಶನಕ್ಕೂ ಅನ್ವಯವಾಗುತ್ತದೆ. ಹೊಸದಾಗಿ ಪ್ರವೇಶ ಪತ್ರ ನೀಡಲಾಗುವುದಿಲ್ಲ.
2. ತಡವಾಗಿ ಬಂದ ಮನವಿಗಳನ್ನು ಪುರಸ್ಕರಿಸಲು ಸಾಧ್ಯವಿಲ್ಲ.

ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಗೆ,

ನಿರ್ದೇಶಕರು,

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಬೆಂಗಳೂರು

ಮಾನ್ಯರೇ,

ವಿಷಯ: ವಿಧಾನ ಮಂಡಲ ಅಧಿವೇಶನ ವರದಿಗೆ ಪ್ರತಿನಿಧಿಗಳನ್ನು ನಿಯೋಜಿಸುವ ಬಗ್ಗೆ

ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನಕ್ಕೆ ನಮ್ಮ ಮಾಧ್ಯಮ ಸಂಸ್ಥೆಯಿಂದ ಈ ಕೆಳಕಂಡ ವರದಿಗಾರರು/ ಕ್ಯಾಮರಾಮನ್‌ಗಳನ್ನು ನಿಯೋಜಿಸಲಾಗಿದೆ.

ವಿಧಾನಸಭೆ ವರದಿ ಮಾಡುವ ವರದಿಗಾರರು/ ಕ್ಯಾಮರಾಮನ್‌ಗಳು:

| ಕ್ರ.ಸಂ. | ಹೆಸರು, ಪದನಾಮ | ಮಾನ್ಯತಾ ಪತ್ರ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|
| 1 | | | |
| 2 | | | |

ವಿಧಾನ ಪರಿಷತ್ ಕಲಾಪ ವರದಿ ಮಾಡುವ ವರದಿಗಾರರು/ ಕ್ಯಾಮರಾಮನ್‌ಗಳು:

| ಕ್ರ.ಸಂ. | ಹೆಸರು, ಪದನಾಮ | ಮಾನ್ಯತಾ ಪತ್ರ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|
| 1 | | | |
| 2 | | | |

ಸ್ಥಳ: ಸಂಸ್ಥೆಯ ಮುಖ್ಯಸ್ಥರು

ದಿನಾಂಕ:

# ರಫ್ತು ನಿರ್ವಹಣಾ ತರಬೇತಿ

**ಬೆಂಗಳೂರು, 18 ನೇ ನವೆಂಬರ್ (ಕರ್ನಾಟಕ ವಾರ್ತೆ)**

ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ಕರ್ನಾಟಕ ಸರ್ಕಾರದ ಸಂಸ್ಥೆ, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು ಬೆಂಗಳೂರು ನಗರ ಕಾಸಿಯಾ ಸಹಯೋಗದೊಂದಿಗೆ 6 ದಿನಗಳ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ದಿನಾಂಕ 15 ರಿಂದ 20ನೇ ಡಿಸೆಂಬರ್ 2014 ರವರೆಗೆ ಬೆಂಗಳೂರಿನಲ್ಲಿ ಆಯೋಜಿಸಲು ಉದ್ದೇಶಿಸಿದೆ.

ಕೈಗಾರಿಕೋದ್ಯಮಿಗಳಿಗೆ ಮತ್ತು ಭಾವಿ ರಫ್ತುದಾರರನ್ನು ರಫ್ತು ಕ್ಷೇತ್ರಕ್ಕೆ ಪ್ರವೇಶಿಸಲು ಪ್ರೋತ್ಸಾಹಿಸುವ ಮೂಲಕ ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ರಫ್ತು ವ್ಯಾಪಾರವನ್ನು ಪ್ರಾರಂಭಿಸಲು ಆಸಕ್ತಿಯುಳ್ಳ ಕೈಗಾರಿಕೆಗಳು/ಭಾವಿ ರಫ್ತುದಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿ.ಟಿ.ಪಿ.ಸಿ. ಕಚೇರಿಯಲ್ಲಿ ದಿನಾಂಕ 10ನೇ ಡಿಸೆಂಬರ್ 2014 ರೊಳಗೆ ನೊಂದಣಿಯನ್ನು ಮಾಡಿಸಬೇಕು.

ತರಬೇತಿಯನ್ನು ಕರ್ನಾಟಕ ಸಣ್ಣ ಕೈಗಾರಿಕಾ ಸಂಘ (KASSIA) ಸಭಾಂಗಣ, 2ನೇ ಮಹಡಿ, ನಂ 2/106, 17ನೇ ಅಡ್ಡ ರಸ್ತೆ , ಮಾಗಡಿ ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು – 560 040 ದೂ 080 – 2335 8698 ಯಲ್ಲಿ ನೀಡಲಾಗುವುದು.

ಹೆಚ್ಚಿನ ವಿವರಕ್ಕಾಗಿ ಶ್ರೀ ಸಿ.ಎಸ್. ಭಾಸ್ಕರ್, ವಿ.ಟಿ.ಪಿ.,ಸಿ. ಇವರನ್ನು ಸಂಪರ್ಕಿಸಬಹುದು. (ಮೊ. 9880958218) ಅಥವಾ ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಕೈಗಾರಿಕಾ ಉತ್ತೇಜನ ಕೇಂದ್ರ, ವಿ.ಟಿ.ಪಿ.ಸಿ. ಕಟ್ಟಡ, 3ನೇ ಮಹಡಿ, ಕಸ್ತೂರ್ ಬಾ ರಸ್ತೆ, ಬೆಂಗಳೂರು – 560 001 ದೂ: 22864 / 22860853 / 22861828, ಫ್ಯಾಕ್ಸ್ 22865202 ಇ– ಮೇಲ್ : md@vtpckarnataka.gov.in ವೆಬ್‌ಸೈಟ್ : www.vtpckarnataka.gov.in.

ಸಮ:ಬಾಬು:ಜಿಪಿಆರ್.

# ಕಾರ್ಮಿಕರಿಗೆ ಮತದಾನ ಮಾಡಲು ಅವಕಾಶ

**ಬೆಂಗಳೂರು, 18 ನೇ ನವೆಂಬರ್ (ಕರ್ನಾಟಕ ವಾರ್ತೆ)**

ರಾಜ್ಯ ಚುನಾವಣಾ ಆಯೋಗವು ಶಿವಮೊಗ್ಗ ಜಿಲ್ಲೆಯ ಜೋಗ್ ಕಾರ್ಗಲ್ ಪಟ್ಟಣ ಪಂಚಾಯತಿಯ 11 ವಾರ್ಡ್‌ಗಳಿಗೆ ಚುನಾವಣೆ ನಡೆಯಲಿದ್ದು, ದಿನಾಂಕ: 05–12–2014 (ಶುಕ್ರವಾರ) ರಂದು ಮತದಾನ ನಡೆಯಲಿದೆ.

ಮತದಾನದ ದಿನದಂದು ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಖಾನೆಗಳು, ಕೈಗಾರಿಕಾ ಸಂಸ್ಥೆಗಳು ಮತ್ತು ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ದಿನಾಂಕ 05–12–2014 ರಂದು ಮತದಾನದ ಕ್ಷೇತ್ರಗಳಲ್ಲಿ ಸಂವಿಧಾನಾತ್ಮಕ ಹಕ್ಕನ್ನು ಚಲಾಯಿಸಲು ಅನುವು ಮಾಡಿಕೊಡುವಂತೆ ಮಾಲೀಕರು/ನಿಯೋಜಕರಿಗೆ ಕಾರ್ಮಿಕ ಆಯುಕ್ತರು ಸೂಚಿಸಿದ್ದಾರೆ.

ಸಮ:ಬಾಬು:ಜಿಪಿಆರ್.

## ಇಂದಿರಾಗಾಂಧಿ ರಾಷ್ಟ್ರೀಯ ಸೇವಾ ಯೋಜನಾ ರಾಷ್ಟ್ರ ಪ್ರಶಸ್ತಿ: ಕರ್ನಾಟಕಕ್ಕೆ 7 ಪ್ರಶಸ್ತಿಗಳು

**ಬೆಂಗಳೂರು, 18 ನೇ ನವೆಂಬರ್ (ಕರ್ನಾಟಕ ವಾರ್ತೆ)**

ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕೆಗಳಿಗೆ ರಾಷ್ಟ್ರಮಟ್ಟದಲ್ಲಿ ನೀಡುವ ಇಂದಿರಾಗಾಂಧಿ ರಾಷ್ಟ್ರೀಯ ಸೇವಾ ಯೋಜನಾ ರಾಷ್ಟ್ರ ಪ್ರಶಸ್ತಿಗಳಲ್ಲಿ ಕರ್ನಾಟಕ್ಕೆ 7 ಪ್ರಶಸ್ತಿಗಳು ದೊರಕಿದ್ದು, ಇದೇ ಮೊದಲ ಬಾರಿಗೆ ಇಷ್ಟು ಸಂಖ್ಯೆಯಲ್ಲಿ ಪ್ರಶಸ್ತಿ ದೊರಕಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಶ್ರೀ ಕೆ. ಅಭಯಚಂದ್ರ ಅವರು ತಿಳಿಸಿದರು.

ಬೆಂಗಳೂರಿನ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಸಂಯೋಜನಾಧಿಕಾರಿ ಶ್ರೀ ಉಮಾಪತಿ ಅವರಿಗೆ ಶ್ರೇಷ್ಠ ನಿರ್ದೇಶನಾಲಯ ಇಂದಿರಾಗಾಂಧಿ ರಾಷ್ಟ್ರಪತಿ ಪ್ರಶಂಸನಾ ಪತ್ರ ದೊರೆತಿದೆ. ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನ ಶ್ರೀ ಪ್ರತಾಪಲಿಂಗಯ್ಯ, ಹುಬ್ಬಳ್ಳಿಯ ಕೆ.ಎಲ್.ಇ. ಸೊಸೈಟಿಯ ಪಿ.ಸಿ. ಜಾಬಿನ ವಿಜ್ಞಾನ ಕಾಲೇಜಿನ ಡಾ: ಪಿ.ಪಿ. ಸೋಮ್ರೇಖರ್, ಮಂಡ್ಯ ಸರ್ಕಾರಿ ಮಹಿಳಾ ಕಾಲೇಜಿನ ಡಾ: ಕೆ.ಬಿ. ನಾರಾಯಣ ಅವರಿಗೆ ಶ್ರೇಷ್ಠ ಸಂಯೋಜನಾಧಿಕಾರಿ ರಾಷ್ಟ್ರ ಪ್ರಶಸ್ತಿ ಹಾಗೂ ಧಾರವಾಡ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ವಿದ್ಯಾರ್ಥಿ ಶ್ರೀ ಬಾಬಾಗೌಡ ಸಿ. ಗಿಡ್ಡಿಗೌಡರ, ಬಾಗಲಕೋಟೆಯ ತೋಟಗಾರಿಕಾ ಕಾಲೇಜಿನ ಶ್ರೀ ಉಮೇಶ್‌ಗೌಡ ಎಸ್. ಪಾಟೀಲ್, ಕೆ.ಆರ್. ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕುಮಾರಿ ಯೋಗೇಶ್ವರಿ ಅವರಿಗೆ ಶ್ರೇಷ್ಠ ಸ್ವಯಂ ಸೇವಕ ರಾಷ್ಟ್ರ ಪ್ರಶಸ್ತಿ ದೊರಕಿದ್ದು ನವೆಂಬರ್ 19 ರಂದು ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ ಅವರು ರಾಷ್ಟ್ರಪತಿ ಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ರಾಷ್ಟ್ರೀಯ ಸೇವಾ ಯೋಜನೆಗೆ 7:5 ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನ ನೀಡುತ್ತಿವೆ. ಆದರೆ ಕರ್ನಾಟಕ ಸರ್ಕಾರವು 2013–14 ನೇ ಸಾಲಿನಿಂದ 50.00 ಲಕ್ಷ ರೂ.ಗಳಷ್ಟು ಹೆಚ್ಚುವರಿ ಅನುದಾನವನ್ನು ನೀಡುತ್ತಿದೆ. ವಿದ್ಯಾರ್ಥಿಗಳಲ್ಲಿ ಸೇವಾ ಭಾವನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮಂಗಳೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ಐಚ್ಛಿಕ ವಿಷಯವಾಗಿ ಪಠ್ಯಕ್ರಮಕ್ಕೆ ಅಳವಡಿಸಲಾಗಿದೆ. ರಾಷ್ಟ್ರೀಯ ಸೇವಾ ಯೋಜನೆಯಡಿ ವಿದ್ಯಾರ್ಥಿಗಳು ಗೃಹ ಬಳಕೆ ಸಾಮಗ್ರಿ ರಿಪೇರಿ, ಕೃಷಿ ಸಂಬಂಧಿಸಿದ ಪಂಪ್‌ಸೆಟ್ ಹಾಗೂ ಇತರ ಉಪಕರಣಗಳ ರಿಪೇರಿ ಸೇರಿದಂತೆ ರಕ್ತದಾನ, ನೇತ್ರದಾನ, ಆರೋಗ್ಯ ತಪಾಸಣೆ, ಗಿಡ ನೆಡುವುದು, ಶ್ರಮದಾನ, ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

ಯೋಜನೆ ಸಬಲೀಕರಣ ಪ್ರಧಾನ ಕಾರ್ಯದರ್ಶಿ ಡಾ: ನಾಗಲಾಂಬಿಕ ದೇವಿ ಅವರು ಮಾತನಾಡಿ ಕರ್ನಾಟಕ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ 28 ವಿಶ್ವವಿದ್ಯಾನಿಲಯಗಳು ಮತ್ತು 4 ನಿರ್ದೇಶನಾಲಯಗಳ ವ್ಯಾಪ್ತಿಯಲ್ಲಿ ಸುಮಾರು ಮೂರು ಲಕ್ಷ ಸ್ವಯಂ ಸೇವಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು. ಎನ್.ಎಸ್.ಎಸ್. ಕಾರ್ಯಚಟುವಟಿಕೆಗಳನ್ನು ತೋಟಗಾರಿಕೆ ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳಿಗೂ ವಿಸ್ತರಿಸಲಾಗಿದೆ ಎಂದು ತಿಳಿಸಿದರು. ರಾಜ್ಯ ಸಂಯೋಜನಾಧಿಕಾರಿ ಡಾ: ಗಣನಾಥ ಹೆಗ್ಗಾರ್ ಅವರು ಉಪಸ್ಥಿತರಿದ್ದರು.